ಬರುವ ಅಗತ್ಯವಿಲ್ಲ. I have to be fair to the concerned Members. That will not form part of the proceedings.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಆದ್ದರಿಂದ ಮುಖ್ಯಮಂತ್ರಿಗಳು ಯಾವಾಗಲೂ ಸದನಕ್ಕೆ ಬರುತ್ತಿರಬೇಕು. ಆಗ ಈ ರೀತಿ ಘಟನೆಗಳು ಆಗುವುದಿಲ್ಲ. ತಾವು ತಡವಾಗಿ ಇಲ್ಲಿಗೆ ಬರುತ್ತೀರಿ, ಅಷ್ಟರಲ್ಲಿ ಈ ರೀತಿ ಘಟನೆಗಳು ಆಗುತ್ತದೆ, ಅನಂತರ ತಾವು ಬಂದು ಕ್ಷಮೆ ಕೇಳಿಕೊಂಡು ಕುಳಿತುಬಿಡುತ್ತೀರಿ.

ಅಧ್ಯಕ್ಷರು : ನಮ್ಮ ಹಣೆಬರಹ ಸರಿಯಾಗಿಲ್ಲದಿದ್ದರೆ ಪಾಪ ಅವರೇನು ಮಾಡುತ್ತಾರೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಅಧ್ಯಕ್ಷರೆ, ನಾವೂ ಇದೇ ರೀತಿ ಮಾಡಿದರೆ ನಮಗೂ ಸಹ ವಿಧಾನಸೌಧ ಸಿಗುತ್ತದೆ ಎಂದು ಭಾವಿಸೋಣವೇ?;

ಅಧ್ಯಕ್ಷರು : ಮಾನ್ಯ ಸಿ.ಎಂ. ಲಿಂಗಪ್ಪನವರೇ, ತಾವು ಮಾತನಾಡಿ.

(ಆ) ಮಾನ್ಯ ರಾಜ್ಯಪಾಲರು ಭಾಷಣ ಮಾಡುವಾಗ ಮಧ್ಯದಲ್ಲಿ ಅಡ್ಡಿಪಡಿಸಿದ ಸದಸ್ಯರ ಕುರಿತು

ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಅಧ್ಯಕ್ಷರೆ, ಪ್ರಸ್ತುತ ಅಧಿವೇಶನದ ಮೊದಲನೆಯ ದಿವಸ ಅಂದರೆ 8-3-1999 ಮಧ್ಯಾಹ್ನ 12-15 ಕ್ಕೆ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ತಮ್ಮ ಭಾಷಣವನ್ನು ಮಾಡಬೇಕಾದ ಕಾರ್ಯಕ್ರಮ ನಿಗದಿಯಾಗಿತ್ತು. ಅಂದಿನ ಸಭೆಯಲ್ಲಿ ಮೇಲ್ಮನೆಯ ಸದಸ್ಯರುಗಳು ಸೇರಿ ಮುನ್ನೂರು ಜನ ಇದ್ದೆವು. ಅಂದು ರಾಜ್ಯಪಾಲರು ಇಲ್ಲಿಗೆ ಬಂದು ತಮ್ಮ ಭಾಷಣವನ್ನು ಓದಲು ಪ್ರಾರಂಭ ಮಾಡಿದ ಕೂಡಲೇ ಈ ಸದನದ ಹಿರಿಯರು ಮತ್ತು ಗೌರವಾನ್ವಿತ ಸದಸ್ಯರಾಗಿರುವಂಥ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಜುಲ್ಫಿಕರ್ ಹಷ್ಮಿರವರು ಎದ್ದು ತಮ್ಮದೇ ಆದ ಧಾಟಿಯಲ್ಲಿ ಗಲಾಟೆ ಮಾಡಿ ರಾಜ್ಯಪಾಲರು ತಮ್ಮ ಭಾಷಣವನ್ನು ಬಹಳ ಸ್ವಲ್ಪ ಸಮಯದಲ್ಲೇ ಮೊಟಕುಗೊಳಿಸಿ ಹೊರಗಡೆ ಹೋಗತಕ್ಕ ಸನ್ನಿವೇಶ ನಿರ್ಮಾಣ ಮಾಡಿದ್ದು ಮಾತ್ರವಲ್ಲ ರಾಜ್ಯಪಾಲರು ತಮ್ಮ ಭಾಷಣವನ್ನು ಪೂರ್ತಿ ಓದುತ್ತಾರೆ ಅದನ್ನು ಕೇಳಬೇಕು ಎಂದು ಕುತೂಹಲದಿಂದ ಕುಳಿತಿದ್ದಂಥ 298 ಸದಸ್ಯರ ಹಕ್ಕು ಏನಿತ್ತು ಅದು ಸಂಪೂರ್ಣವಾಗಿ ಚ್ಯುತಿಯಾಯಿತು. ಅಂದು ರಾಜ್ಯಪಾಲರು ತಮ್ಮ ಭಾಷಣವನ್ನು ನಿಜವಾಗಿಯೂ ಓದಿದರೇ ಎಂಬ ಮೂಲಭೂತ ಪ್ರಶ್ನೆ ಉದ್ಭವಿಸುತ್ತದೆ. ರಾಜ್ಯಪಾಲರು ತಮ್ಮ ಭಾಷಣವನ್ನು ಓದಿದ್ದರೂ if the copy of the Governor's speech is laid on the table of the House, it is presumed that he has read it. ಎಂದು ನಿಯಮ ಹೇಳುತ್ತದೆ. ಆದರೆ ನಾವು ಅಂದು ರಾಜ್ಯಪಾಲರು ಭಾಷಣವನ್ನು ಓದುತ್ತಾರೆ ಎಂಬ ಒಂದೇ ಒಂದು ಉದ್ದೇಶದಿಂದ ಇಲ್ಲಿಗೆ ಬಂದಿದ್ದೆವು. ಅಂದು ರಾಜ್ಯಪಾಲರಾಗಿರಲಿ ಅಥವಾ ಯಾವುದೇ ವ್ಯಕ್ತಿಯಾಗಿರಲಿ ಭಾಷಣವನ್ನು ಓದಲಾರದ ಸ್ಥಿತಿ ನಿರ್ಮಾಣವಾಗಿತ್ತು. ಆ ರೀತಿ ಗಲಾಟೆಯನ್ನು ಏಕೆ ಮಾಡುತ್ತಾರೆ ಎಂಬ ಪ್ರಶ್ನೆ ನಮಗೆಲ್ಲಾ ಬರುತ್ತದೆ. ಗಲಾಟೆ ಮಾಡುವವರ ಉದ್ದೇಶ ಏನೋ ಇರುತ್ತದೆ. ಆ ಉದ್ದೇಶವೇನು ಎಂಬುದು ನಮಗ್ಯಾರಿಗೂ ಅರ್ಥವಾಗಲಿಲ್ಲ. ಅವರ ಉದ್ದೇಶ ಸಾಧನೆಯಾಗಲೂ ಇಲ್ಲ, ಮುಂದೆ ಸಹ ಆಗುವುದಿಲ್ಲ. ಆ ರೀತಿ

ಇದ್ದ ಮೇಲೆ ಅವರು ಏಕೆ ಗಲಾಟೆ ಮಾಡುತ್ತಾರೆ? ಇಷ್ಟೂ ಜನ ಸದಸ್ಯರ ಹಕ್ಕನ್ನು ತಮ್ಮ್ಕೈಗೆ ತೆಗದುಕೊಂಡು ಈ ರೀತಿ ಅಹಿತಕರವಾದ ಗಲಾಟೆಗಳನ್ನು ಮಾಡಿ ಏನನ್ನೂ ಸಾಧನೆ ಮಾಡದಿದ್ದಮೇಲೆ ಬಹುಶಃ ಅಗ್ಗದ ಪ್ರಚಾರಕ್ಕಾಗಿ ಈ ರೀತಿ ಮಾಡುತ್ತಾರೆಂದು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗುತ್ತದೆ. 1989ರಿಂದ 1994ರವರೆಗೆ ಮತ್ತು ನಂತರದ ಈ ಎರಡು ವರ್ಷಗಳಲ್ಲಿ ನಾನು ಇದನ್ನು ಗಮನಿಸಿದ್ದೇನೆ. ರಾಜ್ಯಪಾಲರು ಭಾಷಣ ಮಾಡುವ ಸಂದರ್ಭದಲ್ಲಿ ಕಂಸಾಲೆ ಹೊಡೆಯುವುದಾಗಲೀ ಜನ ತಾಳ ಹಾಕುವುದಾಗಲಿ, ಕೊಂಬು ಕೂಗುವುದಾಗಿದ್ದರೆ ಇಲ್ಲಿ ಇರುವ ಮಾಧ್ಯಮದವರು ರಾಜ್ಯಕ್ಕೆ, ರಾಜ್ಯದ ಜನರಿಗೆ ಏನು ಸಂದೇಶವನ್ನು ಕಳಿಸುತ್ತಾರೆ? ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತಿರುವ ನಮ್ಮ ಪ್ರಭುಗಳು ಈ ಸದನದ ಬಗ್ಗೆ ಎಂಥ ಅಭಿಪ್ರಾಯವನ್ನು ಹೊಂದುತ್ತಾರೆ ಎಂಬ ಪ್ರಶ್ನೆ ಬರುತ್ತದೆ. ಆ ರೀತಿ ತಾಳ, ಕಂಸಾಲೆಗಳನ್ನು ಹಾಕುವುದಿದ್ದರೆ ನಾಳೆ ಯಾರಾದರೂ ಎರಡು ಕೋತಿಮರಿಗಳನ್ನು ತಂದು ಇಲ್ಲಿ ಜಂಗ್ ಎಂದು ನೆಗೆಸಬಹುದು, ಇನ್ನೊಬ್ಬರು ಬುಟ್ಟಿಯಲ್ಲಿ ಹಾವನ್ನು ತಂದು ಇಲ್ಲಿ ಬಿಟ್ಟುಕೊಂಡು ಪುಂಗಿ ಊದಬಹುದು, ಮತ್ತೊಬ್ಬರು ಉಡಾಂಗು, ದೊಂಬರು ಹೊಡೆಯಬಹುದು, ಅದನ್ನು ನೋಡಿ ನಾವುಗಳು ಶಿಳ್ಳೆ ಹೊಡೆಯಬಹುದು. ತಾಳವನ್ನು ಹಾಕುವುದಿದ್ದರೆ ಶಿಳ್ಳೆ ಯಾಕೆ ಹಾಕಬಾರದು? ದಕ್ಷಿಣ ರಾಜ್ಯಗಳ ವಿಧಾನಸಭೆಯು ತನ್ನದೇ ಆದಂಥ ಘನತೆ ಗಾಂಭೀರ್ಯವನ್ನು ಉಳಿಸಿಕೊಂಡು ಬಂದಿದೆಯೆಂದು ಸಾರಿ ಹೇಳಬೇಕಾಗುತ್ತದೆ. ಆದರೆ ಈ ರೀತಿ ಘಟನೆಗಳಾದರೇ ಮುಂದೆ ಆ ಘನತೆ, ಗಾಂಭಿರ್ಯಗಳು ಉಳಿಯುತ್ತದೆಯೇ ಎಂಬುದು ನನ್ನ ಪ್ರಶ್ನೆ. ವಿಧಾನಸಭೆ ಸೇರಿದೆ, ವಿಧೇಯಕಗಳು ಮಂಡನೆಯಾಗುತ್ತದೆ, ಚರ್ಚೆಗಳು ಸ್ವಾರಸ್ಯವಾಗಿ ನಡೆಯುತ್ತದೆ, ಮುಖ್ಯಮಂತ್ರಿಗಳು ಸ್ವಾರಸ್ಯವಾಗಿ ಉತ್ತರವನ್ನು ಕೊಡುತ್ತಾರೆ, ಕೇಳೋಣ ಎಂದು ಇಲ್ಲಿಗೆ ಬರುವ ಪ್ರಜೆಗಳು ಮುಂದೆ ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಕೋತಿ ತಿಮ್ಮನ ಆಟ ಆಗುತ್ತದೆ ನೋಡೋಣ, ದೊಂಬರ ಆಟ ಆಗುತ್ತದೆ ನೋಡೋಣ, ಹಾವಾಡಿಸುತ್ತಾರೆ ಎಂ. ಎಲ್. ಎ.ಗಳು ಎಂಬ ವಿಚಾರವನ್ನು ತಿಳಿದುಕೊಳ್ಳಲು ಬರಬೇಕಾಗುತ್ತದೆ. ಪಶ್ಚಿಮ ಬಂಗಾಳ ಮತ್ತು ಪಾಟ್ನಾಗಳಲ್ಲಿ ಇಂಥದ್ದೇ ಘಟನೆಗಳಾದಾಗ ಅಂದಿನ ಸಭೆಗೆ ರಾಜ್ಯಪಾಲರೇ ಪ್ರಿಸೈಡಿಂಗ್ ಆಫೀಸರ್ ರಾಜ್ಯಪಾಲರು ಅದನ್ನು ನಿಯಂತ್ರಣ ಮಾಡಿರುವ ಪ್ರಕರಣಗಳು ನಮಗೆ ದಾಖಲೆಗಳಿಂದ ಲಭ್ಯವಾಗುತ್ತದೆ. ಅಥವಾ ಯಾವ ಮನೆಯ ಸದಸ್ಯರು ಈ ರೀತಿ ಮಾಡುತ್ತಾರೆ ಈ ಮನೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಕ್ಕೆ ತೆಗೆದುಕೊಂಡು ಇದು ಹಕ್ಕುಚ್ಯುತಿಯಾಗಿದೆ, ಅಂಥವರ ವಿರುದ್ಧ ಕ್ರಮತೆಗೆದುಕೊಳ್ಳತಕ್ಕದ್ದು ದಾಖಲೆಯಲ್ಲಿದೆ. ಮಾನ್ಯ ಅಧ್ಯಕ್ಷರೇ, ರೂಲ್ -27ರಲ್ಲಿ ರಾಜ್ಯಪಾಲರ ಭಾಷಣದ ಅವಧಿಯಲ್ಲಿ ಅನುಸರಿಸ ಬೇಕಾದ ಕ್ರಮ ಎಂಬುದನ್ನು ಈ ರೀತಿ ಕೊಡಲಾಗಿದೆ. ಸಂವಿಧಾನದ 175 ಅಥವಾ 176ನೇ ಅನುಚ್ಛೇದದ ಮೇರೆಗೆ ವಿಧಾನಮಂಡಲದ ಉಭಯ ಸದನಗಳು ಸಭೆ ಸೇರುವಾಗ ಅಥವಾ 175ನೇ ಅನುಚ್ಛೇದದ ಮೇರೆಗೆ ವಿಧಾನ ಸಭೆಯ ಸದಸ್ಯರು ಮಾತ್ರ ಸಭೆ ಸೇರುವಾಗ ರಾಜ್ಯಪಾಲರ ಭಾಷಣದ ಅವಧಿಯಲ್ಲಿ ಯಾರೇ ಸದಸ್ಯರು ಯಾವುದೇ ಭಾಷಣ ಮಾಡುವುದರ ಮೂಲಕ ಅಥವಾ ಯಾವುದೇ ಕ್ರಿಯಾಲೋಪವೆತ್ತಿ ರಾಜ್ಯಪಾಲರ ಭಾಷಣಕ್ಕೆ ಮುಂಚೆಯಾಗಲೀ ಅಥವಾ ತರುವಾಯವಾಗಲೀ ರಾಜ್ಯಪಾಲರ ಭಾಷಣಕ್ಕೆ ಅಡ್ಡಿಯನ್ನುಂಟು ಮಾಡತಕ್ಕದ್ದಲ್ಲ. ಅಥವಾ

ವಿಷ್ನುವನ್ನುಂಟು ಮಾಡತಕ್ಕದ್ದಲ್ಲ. ಮತ್ತು ಅಂಥ ಅಡ್ಡಿಯನ್ನು ಅಥವಾ ವಿಷ್ನುವನ್ನು ಸದನದ ಆದೇಶದ ತೀವ್ರ ಉಲ್ಲಂಘನೆ ಎಂದು ಪರಿಗಣಿಸಿ ವಿಧಾನಸಭೆಯ ಮುಂದಿನ ಉಪವೇಶನದಲ್ಲಿ ವಿಧಾನಸಭಾಧ್ಯಕ್ಷರು ಆ ಬಗ್ಗೆ ಕಾರ್ಯ ವ್ಯವಹರಿಸ ತಕ್ಕದ್ದು ಎಂದು ಇದಕ್ಕೆ ಪೂರಕವಾಗಿ

"Ceremonies connected with the Address of the Governor or the President of India - The Governor's Address to both Houses of Legislature assembled together is the most solemn and formal act under the Constitution. Utmost dignity and decorum befitting that occasion is maintained. Any action on the part of a Member which mars the occasion of the Governor's Address or creates disturbance is punished by the House to which he belongs" ಸನ್ಮಾನ್ಯ ಅಧ್ಯಕ್ಷರೇ, ಆವೊತ್ತು ನಡವಳಿಕೆ ಏನಾಯಿತು ಅಂದು ಅಂದರೆ, ಇಂಥ ರೀತಿಯಲ್ಲಿ ನಡವಳಿಕೆಗಳು ನಡೆದಾಗ ಮುಂದೆ ಈ ಸಭೆಯ ಘನತೆಗೌರವಗಳು ನಿಜವಾಗಿಯೂ ಆತಂಕಕ್ಕೆ ಈಡು ಮಾಡುತ್ತವೆ. ಸಂವಿಧಾನಬದ್ಧವಾಗಿ ನೇಮಕಗೊಂಡಿರತಕ್ಕಂಥ ಈ ರಾಜ್ಯದ ಪ್ರಥಮ ಪ್ರಜೆ, ರಾಜ್ಯಪಾಲರು. ರಾಜ್ಯಪಾಲರು ತಮ್ಮ ಕರ್ತವ್ಯವನ್ನು ನಿರ್ವಿಘ್ನವಾಗಿ ನೆರವೇರಿಸುವುದಕ್ಕೆ ನಾವು ಸಹಕರಿಸುವುದಕ್ಕೆ ಆಗದಿದ್ದರೆ, ನಾವು ಸಂವಿಧಾನಕ್ಕೆ ಅಪಚಾರ ಮಾಡಿದ ಹಾಗೆ ಆಗುತ್ತದೆ. ನಮ್ಮ ನಡವಳಿಕೆ ಸ್ವಲ್ಪ ಸಂವಿಧಾನಬದ್ಧವಾಗಿ ಇರುವಂತೆ ನೋಡಿಕೊಳ್ಳ ಬೇಕಾಗುತ್ತದೆ. ನಾವು ಯಾವುದೇ ಕಾರಣಕ್ಕೂ ತಮಗೆ ಪ್ರತಿಯಾಗಿ ವ್ಯವಹಾರ ಮಾಡಲು ಆಗುವುದಿಲ್ಲ.

ಶ್ರೀ ಜೆ. ಸಿ. ಮಾಧವಸ್ವಾಮಿ : ಮಾನ್ಯ ಅಧ್ಯಕ್ಷರೇ, ಇದು ಪ್ರಿಲೆಮಿನರಿ ಸಬ್‌ಮಿಷನ್ ಆಗಿದೆ. ಇಲ್ಲಿಯೇ ಪೂರ್ಣವಾಗಿ ಮಾತನಾಡಿ ಬಿಟ್ಟರೆ, ತಾವು ತದನಂತರ ಅಲೋ ಮಾಡಿದ ಮೇಲೆ ಮಾನ್ಯ ಸದಸ್ಯರು ಏನು ಮಾತನಾಡುತ್ತಾರೆ? ಕೆಲವು ಮಾತುಗಳಲ್ಲಿ ಪ್ರಿವಿಲೇಜ್‌ನ್ನು ಅಲೋ ಮಾಡಿಕೊಳ್ಳಿ ಎಂದು ಕೇಳಬೇಕು. ಅಕ್ಸೆಪ್ಟ್ ಮಾಡಿ ಎಂದು ಕೇಳಿಕೊಳ್ಳುವುದು ಸರಿ ಅದನ್ನು ಭಾಷಣ ಮಾಡಿ ಬಿಟ್ಟರೆ ಹೇಗೆ ?

ಶ್ರೀ ಸಿ. ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ನಾನು ಸಬ್‌ಮಿಷನ್ ಮಾಡುತ್ತಿದ್ದೇನೆ. ನಾನು ಈ ಸಭೆಯಲ್ಲಿ ತಮ್ಮ ವಿರುದ್ಧವಾಗಿ ಅಥವಾ ತಮಗೆ ಪ್ರತಿಯಾಗಿ ಸಭಾಧ್ಯಕ್ಷನಾಗಿ ಇಲ್ಲಿ ಕುಳಿತುಕೊಳ್ಳಲು ಆಗುವುದಿಲ್ಲ. ಅದಕ್ಕೆ ಸಂವಿಧಾನದಲ್ಲಿ ಅವಕಾಶವೂ ಇಲ್ಲ. ಸಂವಿಧಾನದ ನಿರ್ದೇಶನಗಳು ಏನಿವೆ, ಸಭಾ ನಾಯಕರು, ವಿರೋಧ ಪಕ್ಷದ ನಾಯಕರು, ಸಭಾಧ್ಯಕ್ಷರು, ಸಭೆಯ ಸದಸ್ಯರು, ಇದನ್ನು ನಾನು ಮಾನ್ಯತೆ ಮಾಡದೇ ಹೋದರೆ, ಅದು ಅಪಚಾರವಾಗುತ್ತದೆ. ನಾನು ಕೂಡ ಇವೊತ್ತು ಸದಸ್ಯನಾಗಿ, ಶಾಸಕನಾಗಿ ಜನಪ್ರತಿನಿಧಿ ಆಗಿ ಬಂದಿರುವುದು ಸಂವಿಧಾನದ ನಿರ್ದೇಶನಗಳ ಮೇಲೆಯೇ. ಹೀಗಿರುವುದರಿಂದ ತಮಗೆಲ್ಲರಿಗೂ ಸದನಕ್ಕೂ ನಾನು ಗೌರವವನ್ನುಕೊಡದೇ ಹೋದರೆ ನನಗೂ ಕೂಡ ಗೌರವ ಇರುವುದಿಲ್ಲ. ಇಂಥ ಒಂದು ಸನ್ನಿವೇಶವಾಗಿ ನಮ್ಮ ಹಕ್ಕುಚ್ಯುತಿಯಾಗಿದೆ. ಒಂದು ಕುತೂಹಲಕಾರಿ ಅಂಶವನ್ನು ನಾವು ಗಮನಿಸಬೇಕಾಗುವುದು. ಏನೆಂದರೆ ಮರುದಿವಸದಲ್ಲಿ ಕೆಲವು ಪತ್ರಿಕೆಗಳಲ್ಲಿ ಶ್ರೀಮಾನ್ ವಾಟಾಳ್ ನಾಗರಾಜ್‌ರವರ ಪ್ರತಿಭಾಷಣ ಅಚ್ಚಾಗುತ್ತದೆ. ಇದು ಸಭೆಯ ನಡವಳಿಕೆಗೆ ಅನ್ವಯವಾಗುತ್ತದೆಯೇ ಎಂಬುದನ್ನು ತಾವುಗಳು ದಯವಿಟ್ಟು ಹೇಳಬೇಕು. ರಾಜ್ಯಪಾಲರ

ಭಾಷಣವು ಒಂದು ಕಡೆಯಲ್ಲಿ ಪ್ರಿಂಟ್ ಆದರೆ, ಸದನದ ಒಬ್ಬ ಸದಸ್ಯರ ಪ್ರತಿಭಾಷಣ ಕೂಡ ಕಾನೂನು ಬದ್ಧವಾಗಿ ಓದಿದ ಹಾಗೆ, ಅದು ಪತ್ರಿಕೆಗಳಲ್ಲಿ ಅಚ್ಚು ಆಗಿ ಬೇರೊಂದು ಭಾವನೆಯು ಸಾಮಾನ್ಯ ಜನರಲ್ಲಿ ಬರುತ್ತದೆ. ಇಷ್ಟೆಲ್ಲಾ ಇವರು ಮಾಡುತ್ತಿರುವುದು at whose cost? ನಾನು ಸದನದ ಶಾಸಕನಾಗಿದ್ದರೆ ನನಗೆ ಅನೇಕ ನಿಯಮಗಳು ಇದ್ದಾವೆ. ನನ್ನನ್ನು ನಿಯಂತ್ರಣ ಮಾಡುವುದಕ್ಕೆ ಸಭೆಯ ನಿಯಮಗಳು ಇದ್ದಾವೆ. ಹೀಗೆ ನಿಯಮಗಳನ್ನು ಮೀರಿ ವರ್ತಿಸುವುದಾದರೆ at whose cost at the cost of all the Members. ಅದಕ್ಕಾಗಿ ನಾನು ಹೊರಗಡೆ ಮಾನ್ಯ ರಾಜ್ಯಪಾಲರು ಪ್ರೆಸ್‌ನ್ನು ಕರೆದು ಹೇಳಿರತಕ್ಕಂಥ ವಿಚಾರಗಳನ್ನು ನಾನು ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ಇಂಥ ಘಟನೆಗಳು ಇನ್ನು ಮುಂದೆ ಸಂಪೂರ್ಣವಾಗಿ ನಿಲ್ಲಬೇಕು. ನಿಯಮಾವಳಿಗಳ ಪ್ರಕಾರವೇ ತಾವುಗಳು ಸಂಬಂಧಪಟ್ಟ ಸದಸ್ಯರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ನನ್ನಂಥ ಅನೇಕ ಜನ ಸದಸ್ಯರುಗಳಿಗೆ ಆದ ಹಕ್ಕುಚ್ಯುತಿಯನ್ನು ತಾವು ಎತ್ತಿ ಹಿಡಿದು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರು ಮಾನ್ಯ ಸಿ. ಎಂ. ಲಿಂಗಪ್ಪನವರು ಪ್ರಸ್ತಾಪಿಸಿದ ಹಕ್ಕುಚ್ಯುತಿ ನಿರ್ಣಯದ ಮೇಲೆ ವಿವರಗಳನ್ನು ಕೊಡಲು ಬಯಸುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಅಧ್ಯಕ್ಷರೇ, ಜಂಟಿ ಅಧಿವೇಶನದ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ನಾನು ನಡೆದುಕೊಂಡ ರೀತಿಯ ಬಗ್ಗೆ ಹಕ್ಕುಚ್ಯುತಿ ಆಗುತ್ತದೆ ಎಂದು ಹೇಳಿ, ಅದಕ್ಕೆ ತನ್ನದೇ ಆದಂಥ ಧಾಟಿಯಲ್ಲಿ ಮಾನ್ಯ ಸಿ. ಎಂ. ಲಿಂಗಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಅದು ಯಾವ ಕಾರಣಕ್ಕಾಗಿಯೂ ಹಕ್ಕುಚ್ಯುತಿ ಆಗಲಾರದು ಎಂದು ಸ್ಪಷ್ಟವಾದ ನಿಲುವು ಮತ್ತು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಎರಡನೇದಾಗಿ ಅದು ಜಂಟಿ ಅಧಿವೇಶನ. ಅದು ಸಭೆ ಅಲ್ಲ. ಮೂರನೇದಾಗಿ ಇಂಥ ಸಂದರ್ಭಗಳಲ್ಲಿ ರಾಜ್ಯಸರಕಾರದ ಧೋರಣೆಯನ್ನು ವಿರೋಧಿಸತಕ್ಕಂಥ ರೀತಿಯಲ್ಲಿ ಪ್ರತಿಭಟನೆ ಇರುತ್ತದೆ. ಅದನ್ನು ಬಿಟ್ಟು ಇಲ್ಲಿ ಬೇರೆ ಪ್ರಶ್ನೆ ಬರುವುದಿಲ್ಲವಲ್ಲಾ. ಆದ್ದರಿಂದ ಆ ಸಂದರ್ಭದಲ್ಲಿ ಆ ಪ್ರತಿಭಟನೆ ಮಾಡುವಾಗ, ಬೇರೆ ಬೇರೆ ವಿಧವಿಧಾನಗಳು ಇವೆ. ನಾನು ನನ್ನದೇ ಆದಂಥ ವಿಧಾನದಲ್ಲಿ ಪ್ರತಿಭಟನೆಯನ್ನು ಮಾಡಿದ್ದೇನೆ. ನಾನು ಮುಂದಿನ ಸಾರಿಯೂ ರಾಜ್ಯಪಾಲರ ಭಾಷಣ ಬಂದಾಗಲೂ ಪ್ರತಿಭಟನೆ ಮಾಡುವುದಿಲ್ಲ ಎಂದು ಇಲ್ಲ. ಪ್ರತಿಭಟನೆ ಮಾಡುತ್ತೇನೆ. ಹೀಗೆ ನಾನು ಮಾಡಿದ ಪ್ರತಿಭಟನೆಯನ್ನು ನನ್ನ ವಿರುದ್ಧವಾಗಿ ಮಾಡಿದರು ಎಂದು ರಾಜ್ಯಪಾಲರು ತಿಳಿದುಕೊಳ್ಳಬಾರದು. ಮಾನ್ಯ ಸದಸ್ಯರುಗಳೂ ಕೂಡ ನನ್ನ ಪ್ರತಿಭಟನೆಯು ರಾಜ್ಯಪಾಲರ ಭಾಷಣದ ವಿರುದ್ಧ ಎಂದು ತಿಳಿದುಕೊಳ್ಳಬಾರದು. ಇದು ರಾಜ್ಯಪಾಲರ ವಿರುದ್ಧ ಮಾಡಿದಂಥ ಪ್ರತಿಭಟನೆ ಅಲ್ಲವೇ ಅಲ್ಲ. ನನಗೆ ರಾಜ್ಯಪಾಲರ ಬಗ್ಗೆ ಅಪಾರವಾದಂಥ ಗೌರವವಿದೆ. ಹಾಗೆಯೇ ಅಭಿಮಾನ ಮತ್ತು ವಿಶ್ವಾಸಗಳಿವೆ. ನಾನು ಭಾಷಣ ಮಾಡುವಾಗ ಮುಂದೆಯೂ ಐದು ವರ್ಷಗಳ ಕಾಲ ನಮ್ಮ ರಾಜ್ಯದ ರಾಜ್ಯಪಾಲರಾಗಿ ಭಾಷಣ ಮಾಡಲಿ ಎಂದೂ ಕೂಡ ನಾನು ಹಾರೈಸಿದ್ದೇನೆ. ನನ್ನ ಭಾಷಣದಿಂದ ಈ ಸದನಕ್ಕೆ ಮತ್ತು ರಾಜ್ಯಪಾಲರಿಗೆ ಅಗೌರವಾಗಿದೆ ಮತ್ತು ಇದು ಸದನದ ಹಕ್ಕುಚ್ಯುತಿಯಾಗಿದೆ ಎಂದು ನನಗೆ ಎಂದೂ ಕಾಣಿಸಲಿಲ್ಲ. ಆದರೂ ಕೂಡ ಮಾನ್ಯ ರಾಜ್ಯಪಾಲರು ಎಲ್ಲೋ ಒಂದು ಕಡೆ

ತಮ್ಮ ನೋವನ್ನು ತೋಡಿಕೊಂಡಿದ್ದಾರೆ ಎಂದು ತಿಳಿದಾಗ, ಅವರಿಗೆ ನೋವಾಗಿದ್ದರೆ ನಾನು ವಿಷಾದಿಸುತ್ತೇನೆ ಎಂದೂ ಹೇಳಿದ್ದೇನೆಯೇ ಹೊರತು ನನ್ನ ನಡೆದಂಥ ಘಟನೆಯ ಬಗ್ಗೆ ನಾನು ಇಲ್ಲಿ ವಿಷಾದ ವ್ಯಕ್ತಪಡಿಸತಕ್ಕಂಥ ಪ್ರಶ್ನೆಯೇ ಇಲ್ಲ. ನಾನು ಮುಂದಿನ ರಾಜ್ಯಪಾಲರ ಭಾಷಣ ಬಂದಾಗಲೂ ಈ ತರಹ ಪ್ರತಿಭಟನೆ ಮಾಡತಕ್ಕಂಥಾದ್ದು ಇದ್ದದ್ದೇ. ಇದರ ಬಗ್ಗೆ ಯಾವ ತಕರಾರು ಇಲ್ಲ. ಆದರೆ ಆ ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರು ತಮ್ಮ ಮನಸ್ಸಿಗೆ ನೋವಾಗಿದೆ ಎಂದು ಅಂದುಕೊಂಡಿದ್ದರೆ ಅಥವಾ ಅವರ ಮನಸ್ಸಿಗೆ ನೋವಾಗಿದ್ದರೆ, ನಾನು ಆ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದೇನೆ ಎಂದು ಈಗಾಗಲೇ ಹೇಳಿದ್ದೇನೆ. ಆದ್ದರಿಂದ ಇದು ಹಕ್ಕುಚ್ಯುತಿಯಾಗತಕ್ಕಂಥ ಪ್ರಶ್ನೆ ಬರುವುದಿಲ್ಲ ಎಂಬ ವಿಚಾರವನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಲಿಂಗಪ್ಪನವರು ಪ್ರಸ್ತಾಪ ಮಾಡಿರತಕ್ಕಂಥ ವಿಚಾರದಲ್ಲಿನ ಪ್ರಸ್ತಾವವು ಬಹಳವಾಗಿ ಎಲ್ಲರಿಗೂ ಅನ್ವಯಿಸುತ್ತದೆ. ಅವರು ಬಹಳ ಗಹನವಾದಂಥ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಸಭಾಧ್ಯಕ್ಷರುಗಳ ಕಾನ್‌ಫರೆನ್ಸ್ ಆದಾಗ ಎರಡು ಮೂರು ಸಲ ಈ ವಿಚಾರವು ಚರ್ಚೆಗೆ ಬಂದಿದೆ. ಜಂಟಿ ಅಧಿವೇಶನ ನಡೆಯುವಾಗ ಯಾರು ಇದರ ಅಧ್ಯಕತೆಯನ್ನು ವಹಿಸಿರುತ್ತಾರೆ, ಇದನ್ನು ಕಲಾಪ ಎಂದು ನಾವು ಪರಿಗಣಿಸ ಬೇಕೇ ಬೇಡವೇ ಎನ್ನುವ ಬಗ್ಗೆಯೂ ಕೂಡ ಇನ್ನೂ ಇತ್ಯರ್ಥವಾಗಿಲ್ಲ. ತಾಂತ್ರಿಕವಾಗಿ ನಮಗೆ ಆ ಅಡಚಣೆ ಇದೆ. ಯಾರು ಅಧ್ಯಕ್ಷತೆ ವಹಿಸಿರುತ್ತಾರೆ ? ಯಾರು ಕ್ರಮ ತೆಗೆದುಕೊಳ್ಳ ಬೇಕು? ಅಧಿವೇಶನದಲ್ಲಿ ಎರಡೂ ಸದನದ ಸದಸ್ಯರು ಇರುತ್ತಾರೆ.. ಆದರೂ ಕೂಡ ತಾವುಗಳು ಎತ್ತಿರತಕ್ಕಂಥ ಕೆಲವು ವಿಚಾರಗಳು ಸದನದ ಗಾಂಭೀರ್ಯ ಮತ್ತು ಘನತೆಯನ್ನು ಕಾಪಾಡುವ ದೃಷ್ಟಿಯಿಂದ ಅವನ್ನು ನಾನೂ ಕೂಡ ಸಮರ್ಥಿಸುತ್ತೇನೆ. ಮಾನ್ಯ ವಾಟಾಳ್‌ರವರಲ್ಲಿ ನಾನು ವಿನಂತಿ ಮಾಡಿಕೊಳ್ಳತಕ್ಕದ್ದು ಏನೆಂದರೆ, ತಾವುಗಳು ಪ್ರತಿಭಟನೆಯ ವಿಚಾರವನ್ನು ಹೇಳಿದ್ದೀರಿ. ರಾಜ್ಯಪಾಲರ ಬಗ್ಗೆ ತಮಗಿರುವ ಗೌರವದ ಬಗ್ಗೆಯೂ ಹೇಳಿದ್ದೀರಿ. ಅದನ್ನು ಕೂಡ ನಾನು ಮೆಚ್ಚುತ್ತೇನೆ. ತಾವುಗಳು ಇಷ್ಟು ಹಿರಿಯರಾಗಿದ್ದು ರಾಜ್ಯಪಾಲರಿಗೆ ನೋವು ಉಂಟಾದ ಬಗ್ಗೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದೂ ಕೂಡ ಹೇಳಿದ್ದೀರಿ. ಅದು ಮೆಚ್ಚತಕ್ಕಂತಹ ಗುಣ. ನಿಮ್ಮ ಬಗ್ಗೆ ನಮಗೆಲ್ಲರಿಗೂ ಹೆಮ್ಮೆ ಇದೆ. ನಾನು ತಮ್ಮಲ್ಲಿ ವಿಶೇಷವಾಗಿ ವಿನಂತಿ ಮಾಡಿಕೊಳ್ಳುವುದು : ತಮ್ಮ ಅನುಭವ ಹೆಚ್ಚಾದ ಹಾಗೆಲ್ಲಾ ಹಿರಿಯ ಸದಸ್ಯರಾದಾಗಲೆಲ್ಲಾ ಈ ಸದನಕ್ಕೆ ಬರುವ ಕಿರಿಯ ಸದಸ್ಯರಿಗೆ ತಾವು ಮಾರ್ಗದರ್ಶಕರಾಗಿರುತ್ತೀರಿ. ತಮ್ಮ ಪ್ರತಿಭಟನೆ ಸಲ್ಲಿಸುವುದಕ್ಕೆ ನಾನು ಅಡ್ಡ ಬರುವುದಿಲ್ಲ, ಅದನ್ನು ಇನ್ನೂ ಸ್ವಲ್ಪ ಸುಧಾರಿತ ರೀತಿಯಲ್ಲಿ ಮಾಡಿ, ಅದರಿಂದ ಕಿರಿಯರಿಗೂ ಮಾರ್ಗದರ್ಶನವಾಗುವ ರೀತಿ ಮಾಡಿದರೆ ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ಮಾತ್ರ ನಾನು ಹೇಳುತ್ತೇನೆ. ಮತ್ತೆ ನೀವು ಏನು ವಿವರಣೆ ಕೊಟ್ಟಿದ್ದೀರಿ ಅದು ನನಗೆ ಸಮಾಧಾನವಾಗಿದೆ. ತಾವು ಹೇಳಿದಿರಿ : ನನಗೆ ರಾಜ್ಯಪಾಲರ ಬಗ್ಗೆ ಯಾವ ವಿಧವಾದ ಅಗೌರವವೂ ನನಗಿಲ್ಲ, ನನ್ನ ಪ್ರತಿಭಟನೆ ರಾಜ್ಯಪಾಲರ ವಿರುದ್ಧವಲ್ಲ ಸರ್ಕಾರದ ವಿರುದ್ಧ ಮಾಡಬೇಕಾದ್ದು, ಮುಂದಕ್ಕೂ ಕೂಡ ನಾನು ಮಾಡುತ್ತೇನೆ, ಅದು ನನ್ನ ಹಕ್ಕು ಎಂದಿದ್ದೀರಿ. ಅದು ಮೂಲಭೂತವಾಗಿ ತಮ್ಮಲ್ಲಿರುತ್ತದೆ. ಅದನ್ನು ಕಸಿದುಕೊಳ್ಳುವಂತಹ ಪ್ರಯತ್ನ ನಾನು ಮಾಡುವುದಿಲ್ಲ. ಇಷ್ಟೇ : ನಾನು

ಕಲಾಪ ಮಾಡುವ ವೇಳೆಗೆ ನಾವು ಪ್ರತಿಭಟನೆ ಮಾಡುವ ವೇಳೆಗೆ ನಾವು ಆಡುವ ಮಾತುಗಳು, ನಡೆಸುವಂತಹ ಕೆಲಸಗಳು ಸಭೆಯ ಘನತೆಯನ್ನು ಇನ್ನಷ್ಟು ಹೆಚ್ಚಿಸುವಂತೆ ಆಗಬೇಕು ಎನ್ನುವುದಷ್ಟೇ ನನ್ನ ಆಸೆ. ಇದನ್ನು ಇಲ್ಲಿಗೇ ಮುಕ್ತಾಯ ಮಾಡೋಣ. ಮಾನ್ಯ ಲಿಂಗಪ್ಪನವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ : ದಯಮಾಡಿ ತಾವು ಏನು ನಿರ್ಣಯ ಕೊಟ್ಟಿದ್ದೀರಿ ಇದನ್ನು ಹಿಂದಕ್ಕೆ ಪಡೆದುಕೊಂಡರೆ ಚೆನ್ನಾಗಿರುತ್ತದೆ.

ಶ್ರೀ ಸಿ ಎಂ ಲಿಂಗಪ್ಪ : ಅಧ್ಯಕ್ಷರೇ, ತಾವು ಕೊಟ್ಟ ನಿರ್ಣಯಕ್ಕೆ ವಿರುದ್ಧವಾಗಿ ಹೋಗುವ ಮನವರಿಕೆ ನನ್ನಲ್ಲಿಲ್ಲ. ಒಂದೇ ಒಂದು ವಿಚಾರ: ಶ್ರೀ ವಾಟಾಳ್ ನಾಗರಾಜ್ ಆಗಲಿ ಇನ್ಯಾರೇ ಸದಸ್ಯರಾಗಲಿ ಗವರ್ನರ್ ಭಾಷಣ ಆಗುತ್ತಿದ್ದಾಗ ರೂಲು 27 ಕ್ಕೆ ಬದ್ಧರಾಗಬೇಕಾಗುತ್ತದೆ. ಹಿಶ್ಮಿಯವರು ಕೂಡ ರೂಲ್ 27 ಕ್ಕೆ ಬದ್ಧರಾಗಬೇಕಾಗುತ್ತದೆ. ಇದನ್ನು ಅವರು ಖಂಡಿತ ಮನಸಿನಲ್ಲಿಟ್ಟುಕೊಂಡಿರುತ್ತಾರೆ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿ ತಮ್ಮ ಸ್ಪಷ್ಟೀಕರಣಕ್ಕೆ ವಂದಿಸಿ ನಾನು ತಮಗೆ ಕೊಟ್ಟಿದ್ದ ಹಕ್ಕುಚ್ಯುತಿ ಸೂಚನೆಯನ್ನು ಹಿಂದಕ್ಕೆ ಪಡೆಯುತ್ತಿದ್ದೇನೆ.

ಅಧ್ಯಕ್ಷರು : ಧನ್ಯವಾದಗಳು.

ಶ್ರೀ ಎನ್. ರಾಜಣ್ಣ : ನಾನೂ ಐದು ವರ್ಷದಿಂದ ನೋಡಿಕೊಂಡು ಬಂದಿದ್ದೇನೆ. ರಾಜ್ಯದಲ್ಲಿ ಮೊದಲಿಗರಾದ ರಾಜ್ಯಪಾಲರ ಭಾಷಣಕ್ಕೆ ಇನ್ನೂ ಮುಂದೆ ಆಡಚಣೆ ಮಾಡುವುದಿಲ್ಲ ಎಂದು ಹೇಳಲಿ, ಸಾಕು ಅಷ್ಟೇ.

ಅಧ್ಯಕ್ಷರು : ನೋಡೋಣ ಆಗ ಗವರ್ನರ್ ಯಾರಿರುತ್ತಾರೋ ಸ್ಪೀಕರ್ ಯಾರಿರುತ್ತಾರೋ ಅವರ ಹಣೆಬರಹ.

ಶ್ರೀ ಎನ್ ರಾಜಣ್ಣ : ಗೌರವಾನ್ವಿತ ಸದಸ್ಯರು ಈವತ್ತು ಏತಕ್ಕೆ ಬರುತ್ತಿಲ್ಲ ಎಂದು ಅವರು ಹೇಳುತ್ತಿದ್ದರು. He is the Head of the State, we have to honour, we have to respect our Hon'ble Governor. Discipline is important.

ವಿಷಯ (ಅ) ಕರ್ನಾಟಕ ಪಂಚಾಯತ್ ರಾಜ್ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳುವ ಬಗ್ಗೆ

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಕರ್ನಾಟಕ ಪಂಚಾಯತ್ ರಾಜ್ ಕಾನೂನು ಅಧ್ಯಾದ್ಯಾಪನವನ್ನು ರಿಪ್ಲೇಸ್ ಮಾಡಿ ನಾವು ಆಕ್ಟ್ ತರಬೇಕಾಗುತ್ತದೆ ಮತ್ತು ಮೇಲ್ಮನೆಗೂ ಇದನ್ನು ತೆಗೆದುಕೊಂಡು ಹೋಗಬೇಕಾಗಿರುವುದರಿಂದ ದಯವಿಟ್ಟು ತಾವು ಆದ್ಯತೆ ಮೇಲೆ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ.

ಶ್ರೀಮಲ್ಲಿಕಾರ್ಜುನ ಖರ್ಗೆ : ಆಗುವುದಿಲ್ಲ ಸಾರ್. ಅದರ ಮೇಲೆ ಸುಮಾರು ಎರಡು ತಾಸಾದರೂ ಚರ್ಚೆಯಾಗಬೇಕು. ತಮಗೆ ಗೊತ್ತಿದೆ. ಘೋರ್ಪಡೆ ಮಾತನಾಡುತ್ತಾರೆ. ಮೊಯ್ಲಿ ಇದ್ದಾರೆ, ನಿನ್ನೆ ಹೇಳಿದೆ. ಸುಮಾರು 15ಜನ ಆ ಬಿಲ್ ಮೇಲೆ ಮಾತನಾಡುವವರಿದ್ದಾರೆ. ಆದ್ದರಿಂದ ಅದರ ಚರ್ಚೆಯನ್ನು ಮೊಟಕುಗೊಳಿಸುವುದೂ ಸಾಧುವಲ್ಲ. ಏಕೆಂದರೆ ಎಲ್ಲಾ ಸದಸ್ಯರೂ ತಯಾರಿ ಮಾಡಿಕೊಂಡು ಬಂದಿದ್ದಾರೆ.